# ತಹಶೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ನಂ/ಕಂ/ಪಹಣಿ/ವಿವಾದ/10/2015.16; ದಿನಾಂಕ: 21.07.2016

| ವಾದಿ | ಪ್ರತಿವಾದಿ |
| --- | --- |
| ಉಲವತ್ತಿ ರೇಣುಕಮ್ಮ ಗಂಡ ಲೇಟ್ ಬಸಪ್ಪ | ವಿ ಹನುಮಂತಪ್ಪ ತಂದೆ ಲೇಟ್ ಕಾಳಪ್ಪ |
| ಚಿಂತ್ರಪಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ(ತಾ) | ವಲ್ಲಭಾಪುರ ಗ್ರಾಮ, ಹ.ಬೊ.ಹಳ್ಳಿ(ತಾ) |

ಉಪಸ್ಥಿತರು:**ಕೆ.ಬಿ.ಆನಂದಪ್ಪನಾಯಕ್,** ಕ.ಆ.ಸೇ

**ತಹಶೀಲ್ದಾರರು**

**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಚಿಂತ್ರಪಳ್ಳಿ ಗ್ರಾಮದ ಸರ್ವೆ ನಂ.151/ಎ/2ಎ ವಿ: 01.84 ಎಕರೆ ಜಮೀನನ್ನು ಪೋತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಚಿಂತ್ರಪಳ್ಳಿ ಗ್ರಾಮದ ಸರ್ವೆ ನಂ.151/ಎ/2ಎ ವಿ:01.84 ಎಕರೆ ಜಮೀನನ್ನು ಪೋತಿ ವಾರಸು ಪ್ರಕಾರ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-9/2015-16; ದಿ:17.08.15ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-15.10.15 ರಿಂದ ದಿ:- 21.07.2016ರ ವರೆಗೆ ಕಾಲಾವಕಾಶ ನೀಡಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ129(4)ರನ್ವಯ ವಿಚಾರಣೆ ಮಾಡಲಾಯಿತು. ವಿಚಾರಣೆ ಸಮಯದಲ್ಲಿ ವಾದಿ ಪರವಾಗಿ ಶ್ರೀ ಎ ಶಿವಾನಂದ, ವಕೀಲರು ಹ.ಬೊ.ಹಳ್ಳಿ ಮತ್ತು ಪ್ರತಿವಾದಿ ಪರವಾಗಿ ಶ್ರೀ ಕೆ ಮಹೇಶ್ವರಗೌಡ, ವಕೀಲರು ಹ.ಬೊ.ಹಳ್ಳಿ ಇವರು ವಕಾಲತ್ ಅರ್ಜಿ ಸಲ್ಲಿಸಿರುತ್ತಾರೆ.

ವಾದಿ ಪರ ವಕೀಲರು ತಮ್ಮ ಮೌಖಿಕ ವಾದ ಮಂಡಿಸುತ್ತಾ , ವಾದಿಯು ವಿವಾದಿತ ಜಮೀನಿನ ಖಾತೆದಾರರ ಸಾಕು ಮಗಳಿದ್ದು ಖಾತೆದಾರರ ಆಗುಹೋಗುಗಳನ್ನು ನೋಡಿಕೊಂಡಿದ್ದು ಪೋತಿ ವಾರಸು ಪ್ರಕಾರ ಹಕ್ಕುಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುವುದು ಕಾನೂನುಬದ್ಧವಾಗಿರುತ್ತದೆ ಈ ಬಗ್ಗೆ ತಕರಾರು

(----2)

ಸಲ್ಲಿಸಲು ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲಾ ಕಾರಣ ಪ್ರತಿವಾದಿಯ ತಕರಾರು ಅರ್ಜಿಯನ್ನು ವಜಾಗೊಳಿಸುತ್ತಾ ವಾದಿಯ ಕೋರಿಕೆಯಂತೆ ಹಕ್ಕುಬದಲಾವಣೆಗೆ ಆದೇಶಿಸಲು ವಿನಂತಿಸಿರುತ್ತಾರೆ.

ಈ ಬಗ್ಗೆ ಪ್ರತಿವಾದಿ ಪರ ವಕೀಲರು, ವಾದಿ ಪರ ವಕೀಲರ ವಾದವನ್ನು ಅಲ್ಲಗಳೆಯುತ್ತಾ ವಿವಾದಿತ ಜಮೀನಿನ ಹಾಲಿ ಖಾತೆದಾರರಾಗಿರುವ ಉಲವತ್ತಿ ಶಂಕ್ರಮ್ಮ ಇವರಿಗೂ ಮತ್ತು ವಾದಿಗೆ ಯಾವುದೇ ರೀತಿಯಿಂದ ಸಂಬಂದ ಹೊಂದಿರುವುದಿಲ್ಲಾ ಹಾಗೂ ಅದಕ್ಕೆ ಸಂಬಂದಿಸಿದಂತೆ ಯಾವುದೇ ಪೂರಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲಾ ಆದ್ದರಿಂದ ವಾದಿಯ ಕೋರಿಕೆಯನ್ನು ಪರಿಗಣಿಸಬಾರದೆಂದು ಹಾಗೂ ವಿವಾಧಿತ ಜಮೀನನ್ನು ಪ್ರತಿವಾದಿಯು ಮೂಲ ಮಾಲೀಕನಾದ ಶ್ರೀ ಟಿ ಮರಿಯಪ್ಪ ಎಂಬುವರಿಂದ ದಿನಾಂಕ:27/12/1974 ರಲ್ಲಿ ರೂ3000/– ಗಳಿಗೆ ನೊಂದಾಯಿತ ಕ್ರಯ ವ್ಯವಹಾರದ ಮೂಲಕ ಕ್ರಯಕ್ಕೆ ಹೊಂದಿರುತ್ತಾರೆ ಆ ಪ್ರಕಾರ 2008ನೇ ಸಾಲಿನ ವರೆಗೆ ಪಹಣಿ ದಾಖಲೆಯಲ್ಲಿ ಪ್ರತಿವಾದಿಯ ಹೆಸರು ನಮೂದಿಸಲಾಗಿರುತ್ತದೆ ಆದರೆ ದಿ:ಉಲವತ್ತಿ ಶಂಕ್ರಮ್ಮ ಇವರು ಹೊಸಪೇಟೆ ಸಿವಿಲ್ ನ್ಯಾಯಾಲಯದ ಪ್ರಕರಣ ಸಂ/36/2005; ದಿ:22.02.2007ರ ಆದೇಶದನ್ವಯ ತನ್ನ ಹೆಸರಿನಲ್ಲಿ ಖಾತೆಬದಲಾವಣೆ ಮಾಡಿಸಿಕೊಳ್ಳಲು ಯಶಸ್ವಿಯಾಗಿರುತ್ತಾಳೆ, ಪ್ರತಿವಾದಿಯು ಹೊಸಪೇಟೆ ಸಿವಿಲ್ ನ್ಯಾಯಾಲಯದ ಆದೇಶದ ವಿರುದ್ದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಪೀಲನ್ನು ಹೂಡಿದ್ದು ಅಪೀಲು ಸಂಖ್ಯೆ 1209/2007 ಇದ್ದು ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ ಆದ್ದರಿಂದ ವಾಧಿಯ ಕೋರಿಕೆಯಂತೆ ಹಕ್ಕುಬದಲಾವಣೆಯನ್ನು ವಾದಿಯ ಪರವಾಗಿ ಮಾಡಬಾರದೆಂದು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿ ಪರ ವಕೀಲರು ಮಂಡಿಸಿದ ವಾದದನ್ವಯ ದಾಖಲೆಗಳನ್ನು ಪರಿಶೀಲಿಸಲಾಗಿ,

1.ವಿವಾಧಿತ ಜಮೀನು ಹಾಲಿ ಪಹಣಿ ದಾಖಲೆಯ ಪ್ರಕಾರ ಉಲವತ್ತಿ ಶಂಕ್ರಮ್ಮ ಗಂಡ ಹನುಮಂತಪ್ಪ ಇವರ ಹೆಸರಿನಲ್ಲಿ ಹಕ್ಕು ದಾಖಲೆ ಇರುತ್ತದೆ.

2.ಹಾಲಿ ಖಾತೆದಾರರು ದಿನಾಂಕ:21.12.2013 ರಂದು ಮರಣ ಹೊಂದಿದ್ದು ಅವರ ವಾರಸುದಾರರಾಗಿ ವಾದಿಯು ಇರುವುದು ವಂಶವೃಕ್ಷ ಧೃಡೀಕರಣ ಪತ್ರ ಸಂ/ಆರ್.ಡಿ.0038484038765; ದಿ:11/11/2014ರನ್ವಯ ಕಂಡುಬರುತ್ತದೆ.

3.ಪ್ರತಿವಾದಿ ಪರ ವಕೀಲರು ತಮ್ಮ ಲಿಖಿತ ವಾದದಲ್ಲಿ ತಿಳಿಸಿದಂತೆ ಪ್ರಶ್ನಿತ ವಿವಾದದ ಜಮೀನಿನ ಕುರಿತು ಪ್ರತಿವಾದಿಯು ಹ.ಬೊ.ಹಳ್ಳಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಮಾನ್ಯ ನ್ಯಾಯಾಲಯವು ಪ್ರಕರಣ ಸಂಖ್ಯೆ ಒ.ಎಸ್.ನಂ/114/2000 ದಿನಾಂಕ:11.02.2005ರ ಡಿಕ್ರಿ ಆದೇಶದಲ್ಲಿ ಪ್ರತಿವಾದಿಯು ಪ್ರಶ್ನಿತ ಜಮೀನಿನಲ್ಲಿನ ವಿಸ್ತೀರ್ಣ:01.62 ಎಕರೆ ಜಮೀನಿನ ಹಕ್ಕುದಾರರು/ಮಾಲೀಕರು ಎಂದು ಆದೇಶಿಸಿರುತ್ತದೆ, ಸದರಿ ಆದೇಶದ ವಿರುದ್ದ ಜಮೀನಿನ ಹಾಲಿ ಪಟ್ಟಾದಾರಳು ಹೊಸಪೇಟೆಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಿಸಿದ್ದು ಪ್ರಕರಣ ಸಂಖ್ಯೆ 36/2005ರಲ್ಲಿ ಮಾನ್ಯ ನ್ಯಾಯಾಲಯವು ಹ.ಬೊ.ಹಳ್ಳಿ ಸಿವಿಲ್ ನ್ಯಾಯಾಲಯದ ಆದೇಶವನ್ನು ತೆಗೆದು ಹಾಕಿ ಪಟ್ಟಾದಾರಾದ ಉಲವತ್ತಿ ಶಂಕ್ರಮ್ಮ ಇವರ ಪರವಾಗಿ ಆದೇಶ ಮಾಡಲಾಗಿರುತ್ತದೆ. ಸದರಿ ಆದೇಶವನ್ನು ಪ್ರಶ್ನಿಸಿ ಪ್ರತಿವಾದಿಯು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ (ಧಾರವಾಡ ಪೀಠ)ದಲ್ಲಿ ಮೇಲ್ಮನವಿ ದಾಖಲಿಸಿದ್ದು ಅಪೀಲು ಸಂಖ್ಯೆ 1209/2007ರಲ್ಲಿ ಹಾಲಿ ವಿಚಾರಣಾ ಹಂತದಲ್ಲಿರುವುದು ಕಂಡುಬಂದಿರುತ್ತದೆ.

(----3)

ಹ.ಬೊ.ಹಳ್ಳಿ

ಈ ಮೇಲಿನ ಎಲ್ಲಾ ಅಂಶಗಳಿಂದ ವಿವಾದಿತ ಜಮೀನಿನ ವಿವಾದದ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ (ಧಾರವಾಡ ಪೀಠ)ದಲ್ಲಿ ಹೊಸಪೇಟೆ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದ ಪ್ರಕರಣ ಸಂಖ್ಯೆ/36/2005ರ ಆದೇಶ ವಿರುದ್ದ ಮೇಲ್ಮನವಿ ದಾಖಲಾಗಿ ವಿಚಾರಣಾ ಹಂತದಲ್ಲಿರುವುದರಿಂದ ಈ ನ್ಯಾಯಾಲಯದಲ್ಲಿ ವಿವಾದಿತ ಜಮೀನಿನ ವಿವಾದದ ಕುರಿತು ತೀರ್ಮಾನಿಸಲು ಅಧಿಕಾರ ಇರುವುದಿಲ್ಲಾ, ಕಾರಣ ಉಭಯರು ಪ್ರಶ್ನಿತ ಜಮೀನಿನ ಹಕ್ಕನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ (ಧಾರವಾಡ ಪೀಠ)ದಲ್ಲಿ ನಿರ್ಧರಿಸಿಕೊಳ್ಳಬೇಕಾಗಿರುತ್ತದೆ, ಕಾರಣ ಈ ಕೆಳಗಿನಂತೆ

<u>ಆದೇಶ</u>

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಚಿಂತ್ರಪಳ್ಳಿ ಗ್ರಾಮದ ಸರ್ವೆ ನಂ.151/ಎ/2ಎ ವಿ: 01.84 ಎಕರೆ ಜಮೀನಿನ ಹಕ್ಕುಬದಲಾವಣೆ ಕೋರಿ ವಾದಿಯು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುತ್ತಾ ಪಹಣಿ ದಾಖಲೆಯಲ್ಲಿ ಯಥಾಸ್ಥಿತಿ ಮುಂದುವರಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 21.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಗೆ,
ವಾದಿ/ಪ್ರತಿವಾದಿಗೆ

<u>ಪ್ರತಿಯನ್ನು</u>:
ಶಿರಸ್ತೇದಾರರು ಭೂಮಿ ಕೇಂದ್ರ ತಾಲ್ಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.

ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.